ಕರ್ನಾಟಕ ಸರ್ಕಾರ

ಸಂಖ್ಯೆ:ಪಪೂಶಿಇ/ ಶೈ, ಶಾ–04/ಹೆ.ಮ.ಶು.ವಿ/2011–12

ಆಯುಕ್ತರ ಕಛೇರಿ,
ಪದವಿ ಪೂರ್ವ ಶಿಕ್ಷಣ ಇಲಾಖೆ,
18ನೇ ಅಡ್ಡ ರಸ್ತೆ, ಮಲ್ಲೇಶ್ವರಂ,
ಬೆಂಗಳೂರು–12.

ದಿನಾಂಕ: 12.01.2012

## ಜ್ಞಾಪನ

ವಿಷಯ: 2011–12ನೇ ಶೈಕ್ಷಣಿಕ ವರ್ಷದಲ್ಲಿ ರಾಜ್ಯದ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ವ್ಯಾಸಂಗ ಮಾಡಿತ್ತಿರುವ ಹೆಣ್ಣು ಮಕ್ಕಳ ಶುಲ್ಕ ವಿನಾಯ್ತಿ (ಎಸ್ ಸಿ/ಎಸ್.ಟಿ/ಗ್ರೂಪ್–01 ರ ವಿದ್ಯಾರ್ಥಿನಿಯರನ್ನು ಹೊರತುಪಡಿಸಿ) ಯೋಜನೆಯಡಿ ನೀಡಲಾದ ಶುಲ್ಕ ವಿನಾಯಿತಿಯಿಂದ ಅರೆ ಸರ್ಕಾರೇತರ ಶುಲ್ಕಗಳನ್ನು ಸದರಿ ಅನುದಾನದಿಂದ ಸಂಬಂಧಿಸಿದ ಕಾಲೇಜುಗಳಿಗೆ ಮರುಪಾವತಿ ಮಾಡುವ ಬಗ್ಗೆ.

ಉಲ್ಲೇಖ; 1. ಸರ್ಕಾರದ ಆದೇಶ ಸಂಖ್ಯೆ ಇಡಿ 86 ಯೋಯೋಕ 2011, ಬೆಂಗಳೂರು ದಿನಾಂಕ: 08.04.2011 , [ಇಡಿ :29:ಸ್ವೀಮರ (ಯುನಿಕ್) 2011, ದಿನಾಂಕ: 08.04.2011].

2.ಸರ್ಕಾರದ ಆದೇಶ ಸಂಖ್ಯೆ ಇಡಿ 86 ಯೋಯೋಕ 2011, ಬೆಂಗಳೂರು ದಿನಾಂಕ: 23.08.2011 , [ಇಡಿ :42: ಸ್ವೀಮರ (ಯುನಿಕ್) 2011, ದಿನಾಂಕ: 23.08.2011].

3. ಸರ್ಕಾರದ ಆದೇಶ ಸಂಖ್ಯೆ ಇಡಿ 86 ಯೋಯೋಕ 2011, ಬೆಂಗಳೂರು ದಿನಾಂಕ: 20.12.2011, [ಇಡಿ :42: ಸ್ವೀಮರ (ಯುನಿಕ್) 2011, ದಿನಾಂಕ: 20.12.2011].

***********

ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಸಾಮಾನ್ಯ ವರ್ಗದ ವಿದ್ಯಾರ್ಥಿನಿಯರಿಗೆ (ಎಸ್ ಸಿ/ಎಸ್.ಟಿ/ಗ್ರೂಪ್–01 ರ ವಿದ್ಯಾರ್ಥಿನಿಯರನ್ನು ಹೊರುತುಪಡಿಸಿ) ಸರ್ಕಾರೇತರ ಶುಲ್ಕ ವಿನಾಯಿತಿ ಕಲ್ಪಿಸಬೇಕಾಗಿರುತ್ತದೆ. ಅದ್ದರಿಂದ ಕಾಲೇಜುಗಳ ಸರ್ಕಾರೇತರ ಶುಲ್ಕಗಳನ್ನು ಸದರಿ ವಿದ್ಯಾರ್ಥಿಗಳಿಗೆ ಬಿಡುಗಡೆ ಮಾಡಬೇಕಾಗಿರುತ್ತದೆ.

2011–12 ನೇ ಶೈಕ್ಷಣಿಕ ವರ್ಷಕ್ಕೆ ಈ ಕೆಳಕಂಡ ಸರ್ಕಾರೇತರ ಶುಲ್ಕಗಳನ್ನು ಬಿಡುಗಡೆ ಮಾಡಬೇಕಿರುತ್ತದೆ.

| ಕ್ರಮ ಸಂಖ್ಯೆ | ಶುಲ್ಕಗಳ ವಿವರ | ಪ್ರಥಮ ಪಿಯುಸಿ | ದ್ವಿತೀಯ ಪಿಯುಸಿ |
|---|---|---|---|
| 1 | ಕ್ರೀಡಾ ಶುಲ್ಕ | 70–00 | 70–00 |
| 2 | ವಾಚನಾಲಯ ಶುಲ್ಕ | 100–00 | 100–00 |
| 3 | ಶಿಕ್ಷಕರ ಕಲ್ಯಾಣ ನಿಧಿ | 21–00 | 21–00 |
| 4 | ವಿದ್ಯಾರ್ಥಿ ಕಲ್ಯಾಣ ನಿಧಿ | 21–00 | 21–00 |
| 5 | ಪರೀಕ್ಷಾ ಶುಲ್ಕ (ಕಾಲೇಜಿನ) | 140–00 | 140–00 |
| 6 | ವಿಶೇಷ ಕ್ರೀಡಾ ಶುಲ್ಕ | 28–00 | 28–00 |
| | | 380–00 | 380–00 |

ಸರ್ಕಾರವು 2011-12ನೇ ಶೈಕ್ಷಣಿಕ ವರ್ಷಕ್ಕೆ ರೂ 200-00 ಲಕ್ಷಗಳನ್ನು ಈ ಉದ್ದೇಶಕ್ಕಾಗಿ ಉಲ್ಲೇಖಿತ ಆದೇಶದ ಪ್ರಕಾರ ಮಂಜೂರು ಮಾಡಿದೆ. ಸರ್ಕಾರದ ಆದೇಶ ಸಂಖ್ಯೆ ಇಡಿ 86 ಯೋಯೋಕ 2011, ಬೆಂಗಳೂರು ದಿನಾಂಕ:20.12.2011,[ಇಡಿ :42: ಸ್ಪೀಮರ (ಯುನಿಕ್) 2011, ದಿನಾಂಕ:20.12.2011]. ಮೂರನೇ ತ್ರೈಮಾಸಿಕ ಕಂತಿನಲ್ಲಿ ರೂ 50 ಲಕ್ಷಗಳನ್ನು ಬಿಡುಗಡೆ ಮಾಡಿರುತ್ತಾರೆ.ಈ ಕಂತಿನ ಅನುದಾನವನ್ನು ಜನವರಿ ತಿಂಗಳೊಳಗೆ ಖರ್ಚು ಮಾಡಬೇಕೆಂದು ತಿಳಿಸಿರುತ್ತಾರೆ, ಒಂದು ವೇಳೆ ಜನವರಿ ತಿಂಗಳಿನೊಳಗೆ ಮೂರನೇ ಕಂತಿನ ಅನುದಾನವನ್ನು ಬಳಸಿಕೊಳ್ಳದಿದ್ದರೆ ಮುಂದಿನ ಕಂತುಗಳ ಅನುದಾನವನ್ನು ಸರ್ಕಾರ ಬಿಡುಗಡೆ ಮಾಡುವುದಿಲ್ಲ ಎಂದು ತಿಳಿಸಿರುತ್ತಾರೆ.2011-12 ನೇ ಸಾಲಿನ ವಿದ್ಯಾರ್ಥಿನಿಯರ ಸಂಖ್ಯೆಯನ್ನು ಜಿಲ್ಲಾ ಉಪನಿರ್ದೇಶಕರ ಮೂಲಕ ಪಡೆಯಲಾಗಿದೆ. .ಮೊದಲ ಕಂತಿನಲ್ಲಿ ತರಗತಿ ಪರೀಕ್ಷಾ ಶುಲ್ಕವನ್ನು ಮಾತ್ರ ಪ್ರತಿ ವಿದ್ಯಾರ್ಥಿನಿಗೆ ರೂ 140 ರಂತೆ ಒಟ್ಟು 18 ಜಿಲ್ಲೆಗಳ 35351 ವಿದ್ಯಾರ್ಥಿನಿಯರಿಗೆ ಹಾಗೂ ಎರಡನೇ ಕಂತಿನಲ್ಲಿ 12ಜಿಲ್ಲೆಗಳಿಗೆ 35,500 ವಿದ್ಯಾರ್ಥಿಗಳಿಗೆ ರೂ 49,70,000/-ಗಳನ್ನು ಜಿಲ್ಲಾ ಉಪನಿರ್ದೇಶಕರ ಮುಖಾಂತರ ಅನುದಾನವನ್ನು ಬಿಡುಗಡೆಮಾಡಿ ಸಂಬಂಧಿಸದಂತೆ ಉಪಯೋಗಿತ ಪ್ರಮಾಣ ಪತ್ರವನ್ನು ಪಡೆಯಲಾಗಿದೆ.

ಉಲ್ಲೇಖ 3ರ ಸರ್ಕಾರಿ ಆದೇಶದಂತೆ ಮೂರನೇ ಕಂತಿನ ಅನುದಾನ ರೂ 50,00,000/-ಗಳಲ್ಲಿ ಯಾದಗಿರಿ ಜಿಲ್ಲೆಗೆ ಮೊದಲ ಎರಡು ಕಂತುಗಳಲ್ಲಿ ಯಾವುದೇ ಅನುದಾನವನ್ನು ಬಿಡುಗಡೆ ಮಾಡಿಲ್ಲದ ಕಾರಣ ಈ ಜಿಲ್ಲೆಯ 1282 ವಿದ್ಯಾರ್ಥಿಗಳಿಗೆ ರೂ 140ರಂತೆ ರೂ 1,79,480/-ಬಿಡುಗಡೆ ಮಾಡಿದೆ. ಉಳಿದ ಮೊತ್ತವನ್ನು 27 ಜಿಲ್ಲೆಗಳಲ್ಲಿನ ಒಟ್ಟು 34927 ವಿದ್ಯಾರ್ಥಿನಿಯರಿಗೆ ( ಒಟ್ಟು ವಿದ್ಯಾರ್ಥಿನಿಯರ ಸಂಖ್ಯೆಯ ಶೇ 27ರಂತೆ) ಪ್ರತಿ ವಿದ್ಯಾರ್ಥಿನಿಗೆ ತಲಾ ರೂ 140 ರಂತೆ ಬಿಡುಗಡೆ ಮಾಡಿದೆ.

ಉಪನಿರ್ದೇಶಕರುಗಳಿಗೆ ಬಿಡುಗಡೆ ಮಾಡಲಾದ ಮೊತ್ತವನ್ನು, ಈ ಪತ್ರದೊಂದಿಗೆ ಲಗತ್ತಿಸಿರುವ ಅನುಬಂಧ-01 ರಲ್ಲಿ ತೋರಿಸಲಾಗಿದೆ. ಉಪನಿರ್ದೇಶಕರು ತಮ್ಮ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಪ್ರಸಕ್ತ ಸಾಲಿನಲ್ಲಿ ಪ್ರಥಮ ಮತ್ತು ದ್ವಿತೀಯ ಪಿ.ಯು..ಸಿ ಅಭ್ಯಾಸ ಮಾಡುತ್ತಿರುವ ಸಾಮಾನ್ಯ ವರ್ಗದ ವಿದ್ಯಾರ್ಥಿನಿಯರ (ಎಸ್ ಸಿ/ಎಸ್.ಟಿ/ಗ್ರೂಪ್-01 ರ ವಿದ್ಯಾರ್ಥಿನಿಯರನ್ನು ಹೊರತುಪಡಿಸಿ), ವಿವರಗಳನ್ನು ಪ್ರಾಚಾರ್ಯರಿಂದ ಪಡೆದು ದಿನಾಂಕ31.01.2012 ರೊಳಗೆ ಅನುದಾನವನ್ನು ಬಿಡುಗಡೆ ಮಾಡಲು ಸೂಚಿಸಲಾಗಿದೆ.

ಈ ಅನುದಾನವನ್ನು ಸಾಮಾನ್ಯ ವರ್ಗದ ವಿದ್ಯಾರ್ಥಿನಿಯರಿಗೆ (ಎಸ್ ಸಿ/ಎಸ್.ಟಿ/ಗ್ರೂಪ್-01 ರ ವಿದ್ಯಾರ್ಥಿನಿಯರನ್ನು ಹೊರತುಪಡಿಸಿ) ಪ್ರತಿ ವಿದ್ಯಾರ್ಥಿನಿಗೆ ತರಗತಿ ಪರೀಕ್ಷಾ ಶುಲ್ಕದ ಬಾಬು ರೂ 140-00 ರಂತೆ ಬಿಡುಗಡೆ ಮಾಡಲಾಗಿದೆ ಹಾಗೂ ಸಂಬಂಧಪಟ್ಟ ಕಾಲೇಜುಗಳಲ್ಲಿನ ವಿದ್ಯಾರ್ಥಿನಿಯರಲ್ಲಿ ಶೇ 27ರಂತೆ ಪ್ರತಿ ವಿದ್ಯಾರ್ಥಿನಿಗೆ ರೂ 140-00 ರಂತೆ ಪಾವತಿಸಲು ಸೂಚಿಸಿದೆ

ಸದರಿ ಅನುದಾನವನ್ನು 2202-02-800-1-05-106 ಪ್ಲಾನ್ ಅಡಿಯಲ್ಲಿ ಬಿಡುಗಡೆ ಮಾಡಲು ಸೂಚಿಸಲಾಗಿದೆ. ಮೇಲ್ಕಂಡಂತೆ ಬಿಡುಗಡೆ ಮಾಡಲಾದ ಅನುದಾನದಲ್ಲಿ ಆಯಾ ಜಿಲ್ಲಾ ಉಪನಿರ್ದೇಶಕರು ಸಂಬಂಧಪಟ್ಟ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ಬಿಡುಗಡೆ ಮಾಡಿ ಈ ಮೊತ್ತವನ್ನು ಡಿ.ಸಿ.ಬಿಲ್ಲಿನ ಕೆ.ಎಫ್.ಸಿ. ನಮೂನೆ-5 ರಲ್ಲಿ ಚಲನ್ ಮುಖಾಂತರ ತಮ್ಮ ಜಿಲ್ಲೆಯ ವ್ಯಾಪ್ತಿಯಲ್ಲಿನ ಎಲ್ಲಾ ಸರ್ಕಾರಿ ಪದವಿ

ಪೂರ್ವ ಕಾಲೇಜುಗಳ ಪ್ರಾಂಶುಪಾಲರಗಳು ಕಡ್ಡಾಯವಾಗಿ ಡ್ರಾ ಮಾಡಿಕೊಳ್ಳಲು ಸೂಚಿಸತಕ್ಕದು. ಹಾಗೂ ಪ್ರಾಚಾರ್ಯರುಗಳಿಗೆ ಈ ಕೆಳಕಂಡ ಷರತ್ತುಗಳನ್ನು ಪಾಲಿಸಲು ಸೂಚಿಸಲಾಗಿದೆ.

1. ಸಾಮಾನ್ಯ ವಿದ್ಯಾರ್ಥಿನಿಯರಿಂದ (ಎಸ್ ಸಿ/ಎಸ್.ಟಿ/ಗ್ರೂಪ್–01 ರ ವಿದ್ಯಾರ್ಥಿನಿಯರನ್ನು ಹೊರತುಪಡಿಸಿ) ಸರ್ಕಾರೇತರ ಯಾವುದೇ ಶುಲ್ಕಗಳನ್ನು ವಸೂಲಿ ಮಾಡಿಲ್ಲವೆಂದು ಪ್ರಾಂಶುಪಾಲರ ಧೃಢೀಕರಣ ಪತ್ರ ಪಡೆದು ಬಿಲ್ಲನ್ನು ಮೇಲು ಸಹಿ ಮಾಡುವುದು.
2. ಈ ಬಗ್ಗೆ ವೆಚ್ಚವನ್ನು ನಿಯಮಾನುಸಾರ ಭರಿಸಿ ಲೆಕ್ಕ ಪತ್ರವನ್ನು ನಿರ್ವಹಿಸಲಾಗುವುದು ಎಂಬ ಧೃಢೀಕರಣವನ್ನು ಪ್ರಾಂಶುಪಾಲರಿಂದ ಪಡೆಯತಕ್ಕದ್ದು.

ಜಿಲ್ಲಾ ಉಪನಿರ್ದೇಶಕರು ಈ ಆದೇಶದನ್ವಯ ಬಿಡುಗಡೆ ಮಾಡಲಾದ ಮೊತ್ತದ ಉಪಯೋಗಿತ ಪ್ರಮಾಣ ಪತ್ರವನ್ನು ಈ ಕಛೇರಿಗೆ ದಿನಾಂಕ: 25-01-2012 ರೊಳಗಾಗಿ ಜಂಟಿ ನಿರ್ದೇಶಕರು (ಶೈಕ್ಷಣಿಕ) ಪದವಿ ಪೂರ್ವ ಶಿಕ್ಷಣ ಇಲಾಖೆ, 18 ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–560012. ಇವರಿಗೆ ಕಳುಹಿಸಲು ಸೂಚಿಸಿದೆ

Rrahmil.
ಆಯುಕ್ತರು
ಪದವಿಪೂರ್ವ ಶಿಕ್ಷಣ ಇಲಾಖೆ

ಪ್ರತಿಗಳು:1
1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ, 6ನೇ ಮಹಡಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಸಂಬಂಧಿಸಿದ ಖಜಾನಾಧಿಕಾರಿಗಳು.
4. ಲೆಕ್ಕಪತ್ರಾಧಿಕಾರಿಗಳು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು.
5. ಸಂಬಂಧಿಸಿದ ಎಲ್ಲಾ ಜಿಲ್ಲಾ ಉಪನಿರ್ದೇಶಕರಿಗೆ ಸೂಕ್ತ ಕ್ರಮಕ್ಕಾಗಿ.
6. ಕಛೇರಿ ಪ್ರತಿ.

ಅನುಬಂಧ-01

ಹೆಣ್ಣು ಮಕ್ಕಳ ಶುಲ್ಕ ವಿನಾಯ್ತಿ ಯೋಜನೆಯಡಿ 2011-12 ನೇ ಶೈಕ್ಷಣಿಕ ವರ್ಷಕ್ಕೆ ಸಾಮಾನ್ಯ ವರ್ಗದ ವಿದ್ಯಾರ್ಥಿನಿಯರಿಗೆ (ಎಸ್ ಸಿ/ಎಸ್.ಟಿ/ಗ್ರೂಪ್- 01 ರ ವಿದ್ಯಾರ್ಥಿನಿಯರನ್ನು ಹೊರತುಪಡಿಸಿ) ಸರ್ಕಾರೇತರ ಶುಲ್ಕ ವಿನಾಯತಿಯ ಮೊತ್ತವನ್ನು ಕಾಲೇಜಿಗೆ ಪಾವತಿಸುವ ಬಗ್ಗೆ ಜಿಲ್ಲಾ ಉಪನಿರ್ದೇಶಕರುಗಳಿಗೆ ಮೂರನೆ ಕಂತಿನಲ್ಲಿ ಬಿಡುಗಡೆ ಮಾಡಲಾದ ಮೊತ್ತವನ್ನು ತೋರಿಸುವ ಪಟ್ಟಿ (2011-12 ನೇ ಸಾಲಿನ ಸಾಮಾನ್ಯ ವರ್ಗದ ವಿದ್ಯಾರ್ಥಿನಿಯರಿಗೆ ಸಂಖ್ಯೆಗಳಲ್ಲಿ ಶೇಕಡ 27 ರಂತೆ ಬಿಡುಗಡೆ ಮಾಡಲಾಗಿದೆ.

| ಕ್ರ.ಸಂ | ಜಿಲ್ಲೆಯ ಹೆಸರು | 27 % of the total students | At the Rate per student | Total amount | ಲೆಕ್ಕ ಶೀರ್ಷಿಕೆ |
|---|---|---|---|---|---|
| 1 | ಬೆಂಗಳೂರು-ಉತ್ತರ | 1351 | 140 | 189140 | 2202-02-800-01-05-106 |
| 2 | ಬೆಂಗಳೂರು-ದಕ್ಷಿಣ | 885 | 140 | 123900 | 2202-02-800-01-05-106 |
| 3 | ಬೆಂಗಳೂರು-ಗ್ರಾಮಾಂತರ | 1246 | 140 | 174440 | 2202-02-800-01-05-106 |
| 4 | ರಾಮನಗರ | 1075 | 140 | 150500 | 2202-02-800-01-05-106 |
| 5 | ಬಳ್ಳಾರಿ | 1464 | 140 | 204960 | 2202-02-800-01-05-106 |
| 6 | ಬೆಳಗಾವಿ | 1394 | 140 | 195160 | 2202-02-800-01-05-106 |
| 7 | ಬಾಗಲಕೋಟ | 1172 | 140 | 164080 | 2202-02-800-01-05-106 |
| 8 | ಬಿಜಾಪುರ | 700 | 140 | 98000 | 2202-02-800-01-05-106 |
| 9 | ಬೀದರ | 377 | 140 | 52780 | 2202-02-800-01-05-106 |
| 10 | ದಾವಣಗೆರೆ | 1017 | 140 | 142380 | 2202-02-800-01-05-106 |
| 11 | ಚಿತ್ರದುರ್ಗ | 908 | 140 | 127120 | 2202-02-800-01-05-106 |
| 12 | ಚಿಕ್ಕಮಂಗಳೂರು | 1375 | 140 | 192500 | 2202-02-800-01-05-106 |
| 13 | ಗದಗ | 518 | 140 | 72520 | 2202-02-800-01-05-106 |
| 14 | ಹಾವೇರಿ | 909 | 140 | 127260 | 2202-02-800-01-05-106 |
| 15 | ಧಾರವಾಡ | 415 | 140 | 58100 | 2202-02-800-01-05-106 |
| 16 | ಗುಲ್ಬರ್ಗಾ | 2106 | 140 | 294840 | 2202-02-800-01-05-106 |
| 17 | ಯಾದಗಿರಿ | 565 | 140 | 79100 | 2202-02-800-01-05-106 |
| 18 | ಹಾಸನ | 2162 | 140 | 302680 | 2202-02-800-01-05-106 |
| 19 | ಚಿಕ್ಕಬಳ್ಳಾಪುರ | 961 | 140 | 134540 | 2202-02-800-01-05-106 |
| 20 | ಕೋಲಾರ | 1282 | 140 | 179480 | 2202-02-800-01-05-106 |
| 21 | ಮಂಡ್ಯ | 1902 | 140 | 266280 | 2202-02-800-01-05-106 |
| 22 | ಮೈಸೂರು | 2135 | 140 | 298900 | 2202-02-800-01-05-106 |
| 23 | ಉತ್ತರ ಕನ್ನಡ | 1474 | 140 | 206360 | 2202-02-800-01-05-106 |
| 24 | ಉಡುಪಿ | 1261 | 140 | 176540 | 2202-02-800-01-05-106 |
| 25 | ದಕ್ಷಿಣ ಕನ್ನಡ | 1620 | 140 | 226800 | 2202-02-800-01-05-106 |
| 26 | ಶಿವಮೊಗ್ಗ | 2188 | 140 | 306320 | 2202-02-800-01-05-106 |
| 27 | ತುಮಕೂರು | 2465 | 140 | 345100 | 2202-02-800-01-05-106 |
| | | 34927 | | 4889780 | |
| | | Yadagiri students 1282 | | 179480 | 2202-02-800-01-05-106 |
| | | | | 5069260 | |

Rashmi

ಆಯುಕ್ತರು

ಪದವಿ ಪೂರ್ವ ಶಿಕ್ಷಣ ಇಲಾಖೆ